# ನಗೆಯ ಹಾಯಿದೋಣಿ

'ಅತ್ತಾರ ಅತ್ತು ಬಿಡು ಹೊನಲು ಬರಲಿ ನಕ್ಯಾಕ ಮರಸತೀ ದುಃಖ' ಎನ್ನುವುದು ಬೇಂದ್ರೆ ಕವಿತೆಯೊಂದರ ಸಾಲು. ಅಳುವನ್ನು ಮುಚ್ಚಿಟ್ಟುಕೊಂಡು ನಗುವಲ್ಲಿ ದುಃಖವನ್ನು ಮರೆಮಾಚುವ ಪ್ರಯತ್ನ ಬೇಡ ಎನ್ನುತ್ತಾರೆ ಕವಿ. 'ಮುಗುಳುನಗೆ' ಸಿನಿಮಾದ ನಾಯಕನ ಮನಸ್ಥಿತಿ ಭಿನ್ನವಾಗಿಯೇನೂ ಇಲ್ಲ. ಅಳುವೇ ಬಾರದ ನಾಯಕ ತನ್ನ ಮುಖಕ್ಕೆ ನಗುವನ್ನು ಅಂಟಿಸಿಕೊಂಡು ಬದುಕುವ ಕಥೆ ಚಿತ್ರದ್ದು. ಸಿನಿಮಾದ ಕೊನೆಗೆ ಕಾಣಿಸಿಕೊಳ್ಳುವ ಅಳುವಿನ ಅಮೃತಗಳಿಗೆ ಬದುಕಿನ ಸಾಕ್ಷಾತ್ಕಾರದ ಕ್ಷಣವಾಗಿಬಿಡುತ್ತದೆ. ಇಂಥದೊಂದು ವಿಶಿಷ್ಟ ಕಥೆ 'ಮುಗುಳುನಗೆ' ಚಿತ್ರದಲ್ಲಿದೆಯಂತೆ.

ಗಣೇಶ್ ಪಾಲಿಗೆ 'ಮುಗುಳುನಗೆ' ತೀರಾ ಅನಿವಾರ್ಯವಾಗಿದ್ದ ಸಿನಿಮಾ. ಹಳೆಯ ಗಾಯವನ್ನು ನೆಕ್ಕುವ ಹುಲಿಯಂತೆ, ಗಣೇಶ್ ತಮ್ಮ ಮಳೆದಿನಗಳ ಹುಡುಗಾಟದ ವರ್ಚಸ್ಸನ್ನೇ ನೇವರಿಸುತ್ತಾ ದಣಿದಿರುವ ಸಂದರ್ಭದಲ್ಲಿ, 'ಮುಗುಳುನಗೆ' ಅವರಿಗೆ ಜೊತೆಯಾಗಿದೆ. ಈ ನಗು 'ಮುಂಗಾರುಮಳೆ'ಯ ಭಲೇಜೋಡಿ ಯೋಗರಾಜಭಟ್ – ಗಣೇಶ್‌ರನ್ನು ಮತ್ತೆ ಒಂದುಗೂಡಿಸಿರುವುದು ವಿಶೇಷ. ಭಟ್ಟರು ಮಾತಿನ ಜೋಪಡಿ ಕಟ್ಟುವುದಲ್ಲಿ ಸಿದ್ಧಹಸ್ತರು. ಆದರೆ, ಈ ಸಿನಿಮಾದಲ್ಲಿ ಮಾತಿನಷ್ಟೇ ಮೌನಕ್ಕೂ ಮಹತ್ವವಿದೆಯಂತೆ.

ಹರಿಕೃಷ್ಣರ ಸಂಗೀತ ಸಂಯೋಜನೆಯಲ್ಲಿ ರೂಪುಗೊಂಡಿರುವ ಸಿನಿಮಾದ ಹಾಡುಗಳು ಈಗಾಗಲೇ ಜನಪ್ರಿಯಗೊಂಡಿವೆ. ಚಿತ್ರದ ಗೀತೆಗಳ ಅನಾವರಣವನ್ನು ಭಟ್ಟರ ಬಳಗ ಸರಣಿ ಹಬ್ಬದಂತೆ ಸಡಗರದಿಂದ ಆಚರಿಸಿದೆ. ಗಣೇಶನ ಹಬ್ಬಕ್ಕೆ ತೆರೆ ಕಾಣಬೇಕಿದ್ದ ಈ ಸಿನಿಮಾ ಈಗ ಸೆಪ್ಟೆಂಬರ್ ಮೊದಲ ವಾರದಲ್ಲಿ ಬಿಡುಗಡೆಯಾಗುತ್ತಿದೆ,

'ಮುಗುಳುನಗೆ' ಚಿತ್ರದಲ್ಲಿ ನಾಲ್ವರು ನಾಯಕಿಯರು. ಅಪೂರ್ವ ಆರೋರ, ಆಶಿಕಾ ರಂಗನಾಥ್, ನಿಖಿತಾ ನಾರಾಯಣ್ ಮತ್ತು ಅಮೂಲ್ಯ ಈ ಚಿತ್ರದ ಚೆಲುವಿನ ಸ್ತಂಭಗಳು.

■ ರಘು






## ಸುಂದರ ಮೂಗಿಗೆ ವರದಾನ - ರೈನೋಪ್ಲಾಸ್ಟಿ



ಮೂಗಿನ ಆಕಾರದ ಕುರಿತ ಎಲ್ಲಾ ಸಮಸ್ಯೆಗಳಿಗೆ ರೈನೋಪ್ಲಾಸ್ಟಿಯು ಉತ್ತಮವಾದ ಪರಿಹಾರವಾಗಿದೆ. ಈ ಸೌಲಭ್ಯದಿಂದಾಗಿ ಜನ್ಮತಃ ಯಾವ ರೀತಿಯ ಮೂಗಿನ ವೈಕಲ್ಯವಿದ್ದರೂ ಅದನ್ನು ಹೋಗಲಾಡಿಸಿ ಪರಿಪೂರ್ಣ ಮತ್ತು ಅಂದವಾದ ಮೂಗನ್ನು ಪಡೆಯಬಹುದು. ಅದಾಗಿ ರೈನೋಪ್ಲಾಸ್ಟಿ ಸರ್ಜರಿಯ ಮೂಲಕ ನಿಮ್ಮ ಮೂಗನ್ನು ನೈಸರ್ಗಿಕವಾಗಿ ಕಾಣುವಂತೆ ಮತ್ತು ನಿಮ್ಮ ಮುಖದ ರಚನೆಗೆ ಹೊಂದುವಂತೆ ರೂಪಿಸಲಾಗುವುದು. ಅಲ್ಲದೆ ಹುಟ್ಟಿನಿಂದ ಬರುವ ಮೂಗಿನ ರಚನೆಯಲ್ಲಿನ ದೋಷಗಳು, ಅದರಿಂದ ಉಂಟಾಗುವ ಉಸಿರಾಟದ ಸಮಸ್ಯೆ ಅಥವಾ ಅಪಘಾತದಿಂದಾಗಿ ಮೂಗು ಹಾನಿಗೊಳಗಾಗಿದ್ದಲ್ಲಿ ಮುಂತಾದ ಎಲ್ಲಾ ಸಮಸ್ಯೆಗಳನ್ನು ಪರಿಹರಿಸಬಹುದಾಗಿದೆ.

ಎಲ್ಲಕ್ಕಿಂತ ಹೆಚ್ಚಾಗಿ ನಿಮ್ಮ ಮುಖದ ಅಂದವನ್ನು ಮತ್ತಷ್ಟು ಹೆಚ್ಚಿಸಲು ಅಗತ್ಯವಾದ ಇನ್ನಿತರ ಸರ್ಜರಿ ಪ್ರಕಾರಗಳಾದ ಕೆನ್ನೆಗುಳಿ, ಗಲ್ಲದ ಸರ್ಜರಿ, ಕೆನ್ನೆಯ ಆಕಾರದ ಅಂದವನ್ನು ಮತ್ತಷ್ಟು ಹೆಚ್ಚಿಸುವಿಕೆ ಮತ್ತು ತುಟಿಯ ಆಕಾರವನ್ನು ಸರಿಪಡಿಸುವುದು ಮುಂತಾದ ಹಲವು ಸರ್ಜರಿಗಳನ್ನು ರೈನೋಪ್ಲಾಸ್ಟಿ ಸರ್ಜರಿ ಜೊತೆಯಲ್ಲೇ ನಡೆಸಬಹುದಾಗಿದೆ.

ಆದರೆ ಕೆಲವರಲ್ಲಿ ಸರ್ಜರಿಗೆ ಒಳಗಾಗುವ ಮುನ್ನ ಹಲವು ಬಗೆಯ ಆತಂಕ ಮನೆ ಮಾಡಿರುತ್ತದೆ. ಉದಾಹರಣೆಗೆ : ಮೂಗು ಇರುವುದಕ್ಕಿಂತ ಕೆಟ್ಟುಹೋದರೆ, ಮುಖದ ರಚನೆಗೆ ಸರಿಯಾಗಿ ಹೊಂದಾಣಿಕೆ ಆಗದಿದ್ದರೆ ಅಥವಾ ಮೂಗಿನ ಬದಲಾದ ಸ್ವರೂಪ ಅಥವಾ ಶಾಶ್ವತವಾಗಿರುವುದೋ, ಇಲ್ಲವೋ ಎಂಬ ಆತಂಕ ಮನೆ ಮಾಡಿರುತ್ತದೆ. ಆದರೆ ನೀವು ಒಬ್ಬ ನುರಿತ ಸೌಂದರ್ಯವರ್ಧಕ ವೈದ್ಯರಲ್ಲಿ ಇಂತಹ ಚಿಕಿತ್ಸೆಯನ್ನು ಹೊಂದಿದರೆ ಇದು ನಿಮ್ಮ ಬದುಕಿಗೆ ವರದಾನವಾಗಿ ಪರಿಣಮಿಸುತ್ತದೆ.

ರೈನೋಪ್ಲಾಸ್ಟಿ ಒಂದು ದಿನದ ಸರ್ಜರಿ ಪ್ರಕ್ರಿಯೆ ಆಗಿದ್ದು, ಸಾಧಾರಣತಃ ಮೂರು ಅಥವಾ ನಾಲ್ಕು ದಿವಸದ ನಂತರ ತಮ್ಮ ದೈನಂದಿನ ಕೆಲಸಗಳಲ್ಲಿ ತೊಡಗಿಸಿಕೊಳ್ಳಬಹುದು. ಸರ್ಜರಿಯ ಅನಂತರ ಮೊದಲಿಗೆ ಸ್ವಲ್ಪಮಟ್ಟದ ಊತವಿದ್ದು ಒಂದು ತಿಂಗಳಲ್ಲಿ ಅದು ಕಡಿಮೆಯಾಗಿ ನಿಮ್ಮ ಮೂಗು ಸುಂದರವಾಗಿ ರೂಪುಗೊಂಡಿರುತ್ತದೆ.

ಇನ್ನಿತರೆ ಸೇವೆಗಳು : ಸ್ತನಗಳ ಗಾತ್ರ ಹೆಚ್ಚಿಸುವುದು / ಕಡಿಮೆ ಮಾಡುವುದು, ಬೊಜ್ಜುತನಕ್ಕೆ ಸರ್ಜರಿ, ಹೇರ್ ಟ್ರಾನ್ಸ್‌ಪ್ಲಾಂಟೇಷನ್, ಪುರುಷರ ಎದೆಯ ಸರ್ಜರಿ, ಕೆನ್ನೆಗುಳಿ, ಮುಖದ ಕಾಸ್ಮೆಟಿಕ್ ಸರ್ಜರಿಗಳು, ಇತ್ಯಾದಿ...

ಡಾ : ಗಿರೀಶ್ ಎ. ಸಿ., MBBS, MS, MCh (Plastic Surgery),
ಪ್ಲಾಸ್ಟಿಕ್ ಮತ್ತು ಕಾಸ್ಮೆಟಿಕ್ ಸರ್ಜನ್,

**ಕರ್ಲ್ಸ್ ಮತ್ತು ಕರ್ವ್ಸ್ ಹೇರ್‌ಟ್ರಾನ್ಸ್‌ಪ್ಲಾಂಟೇಷನ್ ಮತ್ತು ಕಾಸ್ಮೆಟಿಕ್ ಸರ್ಜರಿ ಸೆಂಟರ್, ನಂ. 49, ಮೊದಲನೇ ಮಹಡಿ, ವೆಸ್ಟ್ ಆಫ್ ಕಾರ್ಡ್ ರಸ್ತೆ, 6ನೇ ಹಂತ, ಮಹಾಗಣಪತಿನಗರ, ವಾರಿಯರ್ ಬೇಕರಿ ಎದುರು, ರಾಜಾಜಿನಗರ, ಬೆಂಗಳೂರು.**

**www.curlsncurves.com**

**8088400400** **9448571216**

"ಭಾರತ್ ಜ್ಯೋತಿ" ಮತ್ತು "ಅತ್ಯಂತ ಭರವಸೆಯ ಕಾಸ್ಮೆಟಿಕ್ ಸರ್ಜರಿ ಸೆಂಟರ್" ಈ ಪ್ರಶಸ್ತಿಗಳಲ್ಲದೆ ಇನ್ನಿತರ ಹಲವಾರು ಪ್ರತಿಷ್ಠಿತ ಪ್ರಶಸ್ತಿ ವಿಜೇತರು

ಎಲ್ಲಾ ಕಾಸ್ಮೆಟಿಕ್ ಸರ್ಜರಿಗಳ ಬಗ್ಗೆ ಹೆಚ್ಚಿನ ಮಾಹಿತಿಗಾಗಿ ಪ್ರತೀ ಸೋಮವಾರ ಮಧ್ಯಾಹ್ನ 1.30ಕ್ಕೆ ಪಬ್ಲಿಕ್ ನ್ಯೂಸ್ ಚಾನಲ್ ವೀಕ್ಷಿಸಿ